## ನಿವೇದನೆ

# ಸರ್ಕಾರಿ ಶಾಲೆ ಬಲಪಡಿಸಲು ಬೇಕು ಬದ್ಧತೆ
## ಸೌಕರ್ಯ ಕೊರತೆ ನೀಗಿಸಿ, ಮಕ್ಕಳನ್ನು ಆಕರ್ಷಿಸಿ

ಯಾವುದಾದರೂ ಸರ್ಕಾರಿ ಶಾಲೆ ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿದೆಯೆಂದರೆ, ಅದು ನಮ್ಮ ಶಿಕ್ಷಣ ನೀತಿಯ ವೈಫಲ್ಯ ಎಂದೇ ಭಾವಿಸಬೇಕಾಗುತ್ತದೆ. ಕನ್ನಡ ಶಾಲೆಗಳ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ನಮ್ಮ ನಾಡು–ನುಡಿಯ ಕ್ಷೇಮವೂ ಸಾಧ್ಯ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಿದೆ.

ಭಾಷೆಯ ಹಿತಾಸಕ್ತಿ ಕಾಪಾಡುವ ಸಾಂಸ್ಥಿಕ ನೆಲೆಗಳಲ್ಲಿ ಸರ್ಕಾರ ಮತ್ತು ಸರ್ಕಾರದ ಮೇಲುಸ್ತುವಾರಿಯಲ್ಲೇ ನಡೆಯುವ ಶಾಲೆಗಳ ಪಾತ್ರ ಪ್ರಧಾನವಾದುದು. ಸರ್ಕಾರಿ ಶಾಲೆಗಳನ್ನು ಉಳಿಸುವ ಕೆಲಸವೆಂದರೆ ಕನ್ನಡ ಮಾಧ್ಯಮವನ್ನು, ಆ ಮೂಲಕ ಕನ್ನಡ ನುಡಿಯನ್ನು ಉಳಿಸುವ– ಬೆಳೆಸುವ ಕೆಲಸವೂ ಹೌದು.

ಆದರೆ, ನಮ್ಮ ಸರ್ಕಾರಿ ಶಾಲೆಗಳ ಸ್ಥಿತಿ ದಿನೇ ದಿನೇ ಸೊರಗುತ್ತಲೇ ಇರುವುದು ನುಡಿಯ ನೆಲೆಯಲ್ಲಿ ಆತಂಕ ಮೂಡಿಸುವಂತಹುದು. ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಶೇಕಡ 80ಕ್ಕೂ ಹೆಚ್ಚು ಮಕ್ಕಳು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದುತ್ತಿದ್ದರು. ಆ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತ ಈಗ ಶೇಕಡ 50ರ ಆಸುಪಾಸಿಗೆ ಬಂದಿದೆ. ಇಂಗ್ಲಿಷ್ ಮಾಧ್ಯಮ ಎಂಬುದು ಸಮೂಹಸನ್ನಿಯಂತೆ ಆವರಿಸಿದೆ. ಹೋಬಳಿ ಕೇಂದ್ರ ಮತ್ತು ಗ್ರಾಮ ಮಟ್ಟದಲ್ಲೂ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಕಣ್ತೆರೆದು ಸರ್ಕಾರಿ ಶಾಲೆಗಳ ಅಸ್ತಿತ್ವಕ್ಕೆ ಸವಾಲಾಗಿ ಪರಿಣಮಿಸಿವೆ.

ಕನ್ನಡದ ಹಿತಾಸಕ್ತಿಯ ವಿಷಯದಲ್ಲಿ ಯಾವ ರಾಜಿಯೂ ಇಲ್ಲ ಎಂದು ಸಾರ್ವಜನಿಕ ವೇದಿಕೆಗಳಲ್ಲಿ ಮತ್ತು ಸದನದಲ್ಲಿ ದೊಡ್ಡ ಗಂಟಲಲ್ಲಿ ಮಾತನಾಡುವ ಅಧಿಕಾರಸ್ಥರು, ಸರ್ಕಾರಿ ಶಾಲೆಗಳ ಬಲವರ್ಧನೆಗೆ ದೂರದೃಷ್ಟಿಯ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತಹ ಬದ್ಧತೆ ತೋರಿದ ನಿದರ್ಶನಗಳು ಕಡಿಮೆ.

ಇಂಗ್ಲಿಷ್ ಮಾಧ್ಯಮದಲ್ಲಿ ಅದರಲ್ಲೂ ಖಾಸಗಿ ಶಾಲೆಗಳಲ್ಲಿ ಕಲಿಯುವ ಅಪೇಕ್ಷೆ ಹೆಚ್ಚಿದಂತೆಲ್ಲಾ ಸರ್ಕಾರಿ ಶಾಲೆಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಆಗಿರುವುದು ದಿಟ. ಈ ನೆಪದಡಿ, ಇಪ್ಪತ್ತೈದಕ್ಕೂ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಶಾಲೆಗಳನ್ನು ಸಮೀಪದ ಶಾಲೆಗಳೊಂದಿಗೆ ವಿಲೀನಗೊಳಿಸುವ ಚಿಂತನೆ ಪದೇ ಪದೇ ಪುಟಿದೇಳುವುದು ಕೂಡ ಅಷ್ಟೇ ದಿಟ.

ಇಂತಹದೊಂದು ಪ್ರಸ್ತಾವ ಈ ಹಿಂದಿನ ಸರ್ಕಾರಗಳ ಅವಧಿಯಲ್ಲೂ ಚರ್ಚೆಯ ಮುನ್ನೆಲೆಗೆ ಬಂದಿತ್ತು. ಈಗಿನ ಸರ್ಕಾರದ ಅವಧಿಯಲ್ಲೂ ಅಂದರೆ ಕಳೆದ ವರ್ಷ ಕೂಡ ಒಂದು ಸುತ್ತು ಚರ್ಚೆಗೆ ಒಳಗಾಗಿತ್ತು. ಒಂದು ಶಾಲೆ ಮತ್ತೊಂದು ಶಾಲೆಯಲ್ಲಿ ವಿಲೀನವಾಗುವುದೆಂದರೆ ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ ಎಂದು ಅರ್ಥ. ಅಲ್ಲಿಗೆ ಆ ಶಾಲೆಯ ಕಥೆ ಮುಗಿದಂತೆ.

ಇಂತಹದೊಂದು ಚಿಂತನೆಯು ಮಕ್ಕಳ ಕಲಿಯುವ ಅವಕಾಶಗಳನ್ನು ಮೊಟಕುಗೊಳಿಸುವಂತಹುದು ಮತ್ತು ಕನ್ನಡದ ಹಿತಾಸಕ್ತಿಗೆ ಪೆಟ್ಟು ನೀಡುವಂತಹುದು. ರಾಜ್ಯದಲ್ಲಿನ ಒಟ್ಟು 47,116 ಸರ್ಕಾರಿ ಶಾಲೆಗಳಲ್ಲಿ, 16,599 ಶಾಲೆಗಳಲ್ಲಿ 30ಕ್ಕೂ ಕಡಿಮೆ ಮಕ್ಕಳಿದ್ದಾರೆ. ಕೆಲವು ಶಾಲೆಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆ 10ಕ್ಕೂ ಕಡಿಮೆ.

ಹೆಚ್ಚುವರಿ ಶಿಕ್ಷಕರಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಪ್ರಕಟವಾದ ವರದಿಯೊಂದು, ಸರ್ಕಾರಿ ಶಾಲೆಗಳ ಸ್ಥಿತಿಗತಿ ಕುರಿತು ಪುನಃ ಅವಲೋಕಿಸುವಂತೆ ಪ್ರೇರೇಪಿಸಿತು. ಮಕ್ಕಳು ಕಡಿಮೆ ಇರುವ ಶಾಲೆಗಳಲ್ಲಿನ 10,500 ಶಿಕ್ಷಕರನ್ನು ‘ಹೆಚ್ಚುವರಿ’ ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿದೆ. ಶಿಕ್ಷಕರು ಹೆಚ್ಚುವರಿ ಆಗುವುದೆಂದರೆ ಮಕ್ಕಳ ದಾಖಲಾತಿ ಪ್ರಮಾಣ ಇನ್ನಷ್ಟು ಕುಸಿದಿದೆ ಎಂದೇ ಅರ್ಥ. ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತದ ಆಧಾರದ ಮೇಲೆ ಹೆಚ್ಚುವರಿ ಶಿಕ್ಷಕರ ಯಾದಿ ರೂಪು ತಳೆಯುತ್ತದೆ.

ಒಂದರಿಂದ ಐದನೇ ತರಗತಿಯವರೆಗೆ 40 ವಿದ್ಯಾರ್ಥಿಗಳಿಗೆ, ಆರರಿಂದ ಎಂಟನೇ ತರಗತಿಯವರೆಗೆ 35 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಂತೆ ಸರ್ಕಾರ ಅನುಪಾತ ನಿಗದಿಗೊಳಿಸಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿರುವುದರಿಂದಾಗಿ ಎರಡು ವರ್ಷಗಳಿಗೆ ಒಮ್ಮೆ ಹೆಚ್ಚುವರಿ ಶಿಕ್ಷಕರ ಪಟ್ಟಿ ಸಿದ್ಧಪಡಿಸಿ, ಅವರನ್ನು ಇತರೆ ಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತದೆ.

ಶಿಕ್ಷಕರಿಗೆ ಸಂಬಂಧಿಸಿದ ಈ ಕಸರತ್ತಿನ ಕತೆ ಬಿಡಿ. ಕನ್ನಡ ಶಾಲೆಗಳ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ನಮ್ಮ ನಾಡು–ನುಡಿಯ ಕ್ಷೇಮವೂ ಸಾಧ್ಯ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಿದೆ. ಯಾವುದಾದರೂ ಸರ್ಕಾರಿ ಶಾಲೆಯು ವಿದ್ಯಾರ್ಥಿಗಳ ಕೊರತೆಯನ್ನು ಎದುರಿಸುತ್ತಿದೆಯೆಂದರೆ, ಅದು ನಮ್ಮ ಶಿಕ್ಷಣ ನೀತಿಯ ವೈಫಲ್ಯ ಎಂದೇ ಭಾವಿಸಬೇಕಾಗುತ್ತದೆ. ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಾ ಹೋದಂತೆ, ಶಿಕ್ಷಣ ಕ್ಷೇತ್ರದಲ್ಲಿ ಅಸಮಾನತೆಯೂ ಹೆಚ್ಚುತ್ತಾ ಹೋಗುತ್ತದೆ.

ಆದಕಾರಣ, ಸರ್ಕಾರಿ ಶಾಲೆಗಳನ್ನು ಬಲಪಡಿಸುವ ದಿಸೆಯಲ್ಲಿ ಸರ್ಕಾರ ಗಂಭೀರ ಪ್ರಯತ್ನ ನಡೆಸಬೇಕು. ಇದಕ್ಕಾಗಿ ಸ್ಥಳೀಯರ ಸಹಭಾಗಿತ್ವವೂ ಅಗತ್ಯ. ಮಕ್ಕಳನ್ನು ಶಾಲೆಗೆ ಆಕರ್ಷಿಸಲಿಕ್ಕೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯಗಳು ಉತ್ತಮಗೊಂಡು, ಶಿಕ್ಷಕರ ಕೊರತೆ ನೀಗಿದಲ್ಲಿ ಮಕ್ಕಳು ಸರ್ಕಾರಿ ಶಾಲೆಗಳತ್ತ ಸಹಜವಾಗಿಯೇ ಆಕರ್ಷಿತರಾಗುತ್ತಾರೆ. ವಾಸಿಸುವ ಊರಿನಲ್ಲಿಯೇ ಮಕ್ಕಳಿಗೆ ಚೆನ್ನಾಗಿ ಕಲಿಸುವಂಥ ಸರ್ಕಾರಿ ಶಾಲೆಯೊಂದು ದೊರೆತರೆ ಪೋಷಕರು ಕೂಡ ಬೇಡವೆನ್ನಲಾರರು.

■ ಎನ್. ಉದಯಕುಮಾರ್

